# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 500(536)

ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು (ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 20/02/2023

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿಯ ಹೆಸರು/ಪೋಷಕರ ಹೆಸರು ತಿದ್ದುಪಡಿ ಸಂಬಂಧ ಸರ್ಕಾರದಿಂದ ಆದೇಶಗಳನ್ನು ಹೊರಡಿಸಲಾಗಿದೆಯೇ: (ಸಂಪೂರ್ಣ ವಿವರ ನೀಡುವುದು) | ಆದೇಶ ಹೊರಡಿಸಿರುವುದಿಲ್ಲ, ಆದರೆ ಸುತ್ತೋಲೆ ಸಂಖ್ಯೆ: ಇಡಿ 100 ಡಿಟಿಬಿ 2014 ದಿನಾಂಕ:26/10/2015ರನ್ನು ಹೊರಡಿಸಿದ್ದು, ಸದರಿ ಸುತ್ತೋಲೆಯಲ್ಲಿ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಮಾರ್ಗದರ್ಶನ ನೀಡಿ ಎಲ್ಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಲಾಗಿದೆ. (ಅನುಬಂಧಿಸಿದೆ). |
| (ಆ) | ಶಿಕ್ಷಣ ಕಾಯ್ದೆಯಂತೆ ವಿದ್ಯಾರ್ಥಿಗಳು/ಪೋಷಕರ ಹೆಸರನ್ನು ತಿದ್ದುಪಡಿ ಮಾಡಲು ಮನವಿ ಮಾಡಿದಲ್ಲಿ ಯಾರಿಗೆ ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿಯ ಹೆಸರು/ಪೋಷಕರ ಹೆಸರನ್ನು ತಿದ್ದುಪಡಿ ಮಾಡಲು ಅಧಿಕಾರ ನೀಡಲಾಗಿದೆ: (ಸಂಪೂರ್ಣ ವಿವರ ನೀಡುವುದು) | ಶಿಕ್ಷಣ ಕಾಯ್ದೆಯಲ್ಲಿ ಈ ವಿಷಯದ ಬಗ್ಗೆ ಪ್ರಸ್ತಾಪಿಸಲಾಗಿರುವುದಿಲ್ಲ. |
| (ಇ) | ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿಯ ಹೆಸರು/ಪೋಷಕರ ಹೆಸರು ತಿದ್ದುಪಡಿ ಸಂಬಂಧ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹೊರಡಿಸುವ ಸುತ್ತೋಲೆಗಳು ಸರ್ಕಾರದ ಆದೇಶಗಳೇನು: (ಸಂಪೂರ್ಣ ವಿವರ ನೀಡುವುದು) | ಸರ್ಕಾರದ ಸುತ್ತೋಲೆಗಳು ಆದೇಶಗಳಲ್ಲದೇ ಇದ್ದರೂ ಸಹ ಆದೇಶಗಳಂತೆ ಪ್ರಾಮುಖ್ಯತೆ ಹೊಂದಿರುತ್ತದೆ. |
| (ಈ) | ವಿದ್ಯಾರ್ಥಿಗಳ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿಯ ಹೆಸರು/ಪೋಷಕರ ಹೆಸರು ತಿದ್ದುಪಡಿ ಮಾಡಲು ಕಂದಾಯ ಇಲಾಖೆ ವಂಶವೃಕ್ಷ/ಅಫಿಡವಿಟ್/ಆಧಾರ್/ಇತರೆ ದಾಖಲೆಗಳು ಸಾಕಾಗುವುದಿಲ್ಲವೇ; | ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 100 ಡಿಟಿಬಿ 2014 ದಿನಾಂಕ:26/10/2015ರ ಕ್ರಮ ಸಂಖ್ಯೆ: 05 ರಲ್ಲಿ ಒಂದನೆ ತರಗತಿಯಿಂದ ಎಸ್.ಎಸ್.ಎಲ್.ಸಿ. ಯವರೆಗೆ ಓದುತ್ತಿರುವ ವಿದ್ಯಾರ್ಥಿಗಳ ಶಾಲಾ ದಾಖಲಾತಿಯಲ್ಲಿ ನಮೂದಿಸುವಾಗ ಆಗಿರುವ ತಪ್ಪುಗಳನ್ನು ತಿದ್ದುಪಡಿ ಮಾಡುವಾಗ ಪಡಿತರ ಚೀಟಿ, ಆಧಾರ್ ಕಾರ್ಡುಗಳ ಆಧಾರದ ಮೇಲೆ ವಿದ್ಯಾರ್ಥಿಗಳ ಪೋಷಕರಿಂದ ಸ್ವ-ಘೋಷಣೆ (ಸೆಲ್ಫ್ ಅಫಿಡವಿಟ್) ಪಡೆಯಬೇಕು ಈ ಸ್ವ-ಘೋಷಣೆಯಲ್ಲಿ ನೀಡಿರುವ ಮಾಹಿತಿಗಳು ಸುಳ್ಳೆಂದು ಕಂಡು ಬಂದಲ್ಲಿ ಅಂತಹ ಕ್ರಮ ಶಿಕ್ಷಾರ್ಹವಾಗುವುದರಿಂದ ಭಾರತೀಯ ದಂಡ ಸಂಹಿತೆ ಪ್ರಕಾರ ಶಿಕ್ಷೆಗೆ ಒಳಪಡಿಸಬಹುದೆಂದು ಸದರಿ ಸ್ವ-ಘೋಷಣೆಯಲ್ಲಿ ನಮೂದಿಸಿರಬೇಕು ಎಂದು ಮಾರ್ಗದರ್ಶನ ನೀಡಲಾಗಿರುತ್ತದೆ. |

| | | |
|---|---|---|
| (ಉ) | ವಿದ್ಯಾರ್ಥಿಗಳು/ಪೋಷಕರ ಹೆಸರನ್ನು ತಿದ್ದುಪಡಿ ಮಾಡುವ ಸಂಬಂಧ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮಾನ್ಯ ನ್ಯಾಯಾಲಯಗಳಿಂದ ಡಿಕ್ರಿ ಪಡೆಯುವಂತೆ ಸೂಚಿಸುತ್ತಿದ್ದು ಈ ಸಂಬಂಧ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆಯೇ? (ಸಂಪೂರ್ಣ ವಿವರ ನೀಡುವುದು) | ಸರ್ಕಾರವು ಆದೇಶವನ್ನು ಹೊರಡಿಸಿಲ್ಲ ಆದರೆ, ಸುತ್ತೋಲೆ ಸಂಖ್ಯೆ: ಇಡಿ 100 ಡಿಟಿಬಿ 2014 ದಿನಾಂಕ:26/10/2015ರಲ್ಲಿ ಮಾರ್ಗದರ್ಶನ ನೀಡಿದೆ. |
| (ಊ) | ವಿದ್ಯಾರ್ಥಿಗಳು/ಪೋಷಕರ ಹೆಸರನ್ನು ತಿದ್ದುಪಡಿ ಮಾಡಲು ಶಿಕ್ಷಣ ಕಾಯ್ದೆಯಲ್ಲಿ ಅವಕಾಶ ಇದೆಯೇ ಅಥವಾ ಇಲ್ಲವೆ: ಹಾಗಿಲ್ಲದ್ದಲ್ಲಿ, ವಿದ್ಯಾರ್ಥಿಗಳು/ಪೋಷಕರ ಹೆಸರನ್ನು ತಿದ್ದುಪಡಿ ಮಾಡಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಿದೆ? (ಸಂಪೂರ್ಣ ವಿವರ ನೀಡುವುದು) | ಶಿಕ್ಷಣ ಕಾಯ್ದೆಯಲ್ಲಿ ಈ ವಿಷಯದ ಬಗ್ಗೆ ಪ್ರಸ್ತಾಪಿಸಲಾಗಿರುವುದಿಲ್ಲ.<br>ಸುತ್ತೋಲೆ ಸಂಖ್ಯೆ: ಇಡಿ 100 ಡಿಟಿಬಿ 2014 ದಿನಾಂಕ:26/10/2015ರಲ್ಲಿ ಮಾರ್ಗದರ್ಶನ ನೀಡಿದೆ. |

ಸಂಖ್ಯೆ: ಇಪಿ 10 ಪಿಡಿಬಿ 2023

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

